ನಿಯಮ 334 ಮೇರೆಗೆ

ಉಪಾಧ್ಯಕ್ಷರು : ಈಗ ನಿಯಮ 334ರ ಮೇಲೆ ಸಭೆಯಲ್ಲಿ ಬರುವ ವಿಷಯಗಳು.

1) ಮಾಜಿ ಗೇಣಿದಾರರಿಂದ ಪರಿಹಾರಧನ ವಸೂಲಾತಿ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಉಪಾಧ್ಯಕ್ಷರೇ ಕರ್ನಾಟಕ ಘನಸರ್ಕಾರವು ಮಾಜಿ ಗೇಣಿದಾರರ ಪರಿಹಾರ ಹಣವನ್ನು ಹಾಗೂ ಬಡಭೂರಹಿತರ ಅಕ್ರಮಿತ ಭೂಮಿಯನ್ನು ಸಕ್ರಮಗೊಳಿಸತಕ್ಕಂಥ ಜನಪರ ಕಾರ್ಯಕ್ರಮ ತಂದರೂ ಸಹ ದಕ್ಷಿಣ ಕನ್ನಡ ಉನ್ನತ ಅಧಿಕಾರಿಗಳ ಆದೇಶದ ಪ್ರಕಾರ ಮಾಜಿ ಗೇಣಿದಾರರಿಗೆ ಪರಿಹಾರ ಹಣ ವಸೂಲಾತಿಯ ಬಗ್ಗೆ ಮನೆ ಜಪ್ತಿಮಾಡುತ್ತೇವೆ ಎಂಬ ಬೆದರಿಕೆ ಹಾಕಿರುವುದು, ಆಕ್ರಮಣದಾರಿಗೆ ದಪ್ಪಟ್ಟುದಂಡನೆ ತೀರ್ಪು ವಿಧಿಸಿ 7 ದಿನಗಳ ಗಡುವಿನೊಂದಿಗೆ ಮನೆ ಜಪ್ತಿಯ ಆದೇಶ ಹೊರಡಿಸಿರುವುದು ಮತ್ತು ಜನಸಂಪರ್ಕ ಸಭೆಗಳನ್ನು ನಡೆಸದೇ ತಮ್ಮ ಮಂದಗಾಮಿ ನಿಲುವು ಹಾಗೂ ಪ್ರತಿಕಾರ ಭಾವನೆ ತಳಿದಿರುವುದನ್ನು ಮಾಡಿದರೆ ಸರ್ಕಾರಕ್ಕೆ ಕೆಟ್ಟ ಹೆಸರು ತರುವಂಥ ಉದ್ದೇಶವನ್ನೂ ಹೊಂದಿರುತ್ತರೋ ಎಂಬ ವಿಚಾರವನ್ನು ಈ ಸದನದಲ್ಲಿ ಸರ್ಕಾರದ ಗಮನ ಸೆಳೆಯುತ್ತಾ ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವನ್ನು ಕೇಳಲಿಚ್ಚಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಮಂತ್ರಿ): ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಜಿ ಗೇಣಿದಾರರಿಂದ ಪ್ರೀಮಿಯಂ ಹಣ ವಸೂಲಾತಿ ಮತ್ತು ಸರ್ಕಾರಿ ಜಮೀನು ಅಕ್ರಮಣ ಮಾಡಿದವರಿಗೆ ಟಿ.ಟಿ. ದಂಡನೆ ವಿಧಿಸ ಕಾನೂನು ಅನುಸಾರ ಭೂಕಂದಾಯ ನಿಯಮಾವಳಿ 1966ರ ನಿಯಮ 112ರಂತೆ ವಸೂಲಾತಿಗಾಗಿ ನೋಟಿಸು ನೀಡಿರುವುದು ಇರುತ್ತದೆ. ಆದರೆ ಜಪ್ತಿ ಮಾಡಿದ ಪ್ರಕರಣಗಳು ಇರುವುದಿಲ್ಲ. ಜನಸಂಪರ್ಕ ಸಭೆಗಳನ್ನು ಆಗಾಗ ನಡೆಸಲಾಗುತ್ತದೆ. ಈ ಎಲ್ಲಾ ಕಾರ್ಯಗಳನ್ನು ಸರ್ಕಾರದ ನೀತಿಗೆ ಅನುಸಾರವಾಗಿ ಮತ್ತು ನಿಯಮಾನುಸಾರವಾಗಿ ಮಾಡುತ್ತಿದ್ದು ಮಂದಗಾಮಿ ನಿಲುವನ್ನು ಹೊಂದಿರುವುದಿಲ್ಲ. ಮತ್ತು ಸರ್ಕಾರಕ್ಕೆ ಕೆಟ್ಟ ಹೆಸರು ತರುವಂಥ ಉದ್ದೇಶವಾಗಲೀ ಪ್ರತಿಕಾರ ಮನೋಭಾವನೆ ಆಗಲೀ ಇರುವುದಿಲ್ಲ. ಯಾವುದಾದರೂ ನಿದರ್ಶನ ಇದ್ದರೆ ಮತ್ತು ತಾವು ಅದನ್ನು ನನ್ನ ಗಮನಕ್ಕೆ ತಂದರೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

2) ಭದ್ರಾವತಿಯಲ್ಲಿ ತಾಂತ್ರಿಕ ಡಿಪ್ಲೊಮೋ ತರಬೇತಿ.

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಉಪಾಧ್ಯಕ್ಷಿಣಿಯರೇ ಕರ್ನಾಟಕ ಸರ್ಕಾರ 1984ರಲ್ಲಿ ಭದ್ರಾವತಿ ನಗರದಲ್ಲಿ ತಾಂತ್ರಿಕ ಡಿಪ್ಲೋಮೋ ಶಿಕ್ಷಣ ಸಂಸ್ಥೆ ತೆರೆದು ಕಾಗದ ಮತ್ತು ಸಕ್ಕರೆ ತಾಂತ್ರಿಕ ಶಿಕ್ಷಣವನ್ನು ನಿಡುತ್ತಿದ್ದೆ. ಇದುವರಿಗೆ 60 ಮಂದಿ ವಿದ್ಯಾರ್ಥಿಗಳು ಈ ಡಿಪ್ಲೋಮೋ ಉತ್ತೀರ್ಣ ಪ್ರಮಾಣ ಪತ್ರ ಪಡೆದಿರುತ್ತಾರೆ. ಆದರೂ ಈ ವರೆಗೆ ಯಾರಿಗೂ ಉದ್ಯೋಗಾವಕಾಶ ದೊರೆತಿಲ್ಲ. ಇದಕ್ಕೆ ಸರ್ಕಾರ ಹುದ್ದೆಯ ಹೆಸರನ್ನು ದೃಢೀಕರಿಸದೇ ಇರುವುದು, ಮತ್ತು ಕಾಗದ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಉದ್ಯೋಗಾವಕಾಶವನ್ನು ಕೊಡುವಂತೆ ಆದೇಶ ನೀಡದೆ ಇರುವುದೇ ಕಾರಣವಾಗಿದೆ. ಇತರ ಬಗ್ಗೆ ಮಾನ್ಯ ಶಿಕ್ಷಣ ಸಚಿವರಿಂದ ಉತ್ತರ ನಿರೀಕ್ಷಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ, ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಉಪಾದ್ಯಕ್ಷರೇ, ನನ್ನ ಉತ್ತರ ಈ ರೀತಿ ಇದೆ.

ಭದ್ರಾವತಿ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ, ಕಾಗದ ಹಾಗೂ ಸಕ್ಕರೆಯ ವಿಷಯದ ಬಗ್ಗೆ ಮೂರು ವರ್ಷಗಳ ಡಿಪ್ಲೊಮೋ ತರಗತಿಗಳನ್ನು ನಡೆಸಲಾಗುತ್ತಿದೆ. ಇದುವರೆವಿಗೂ

ಒಟ್ಟು ನಾಲ್ಕು ಬ್ಯಾಜ್‌ಗಳಲ್ಲಿ 60 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ, ಶುಗರ್ ಮತ್ತು ಪೇಪರ್ ಟೆಕ್ನಾಲಜಿಯಲ್ಲಿ ಡಿಪ್ಲೋಮಾ ಪದವಿಯನ್ನು ಪಡೆದಿರುತ್ತಾರೆ. ಇವರಿಗೆ ಸಕ್ಕರೆ ಮತ್ತು ಕಾಗದ ಕಾರ್ಖಾನೆಗಳಲ್ಲಿ ಉದ್ಯೋಗ ಸಿಗಬೇಕು.

ಈ ದಿಸೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯು, ಡೈರೆಕ್ಟರ್ ಆಫ್ ಷುಗರ್ ಇವರ ಮುಖಾಂತರ ಸಕ್ಕರೆ ಕಾರ್ಖಾನೆಗಳಲ್ಲಿ ಉದ್ಯೋಗವನ್ನು ಕೊಡಿಸಲು ಪ್ರಯತ್ನ ಪಡುತ್ತಿದೆ.

ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಭದ್ರಾವತಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಜೊತೆ ಸಮಾಲೋಚಿಸಿ ಭದ್ರಾವತಿಯಲ್ಲಿರುವ ಸಕ್ಕರೆ ಮತ್ತು ಕಾಗದ ಕಾರ್ಖಾನೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಇವರಿಗೆ ಉದ್ಯೋಗ ನೀಡಲು ಪ್ರಯತ್ನಿಸಲಾಗುತ್ತಿದೆ.

ಈ ಡಿಪ್ಲೋಮಾದಾರಕರಲ್ಲಿ ಕೆಲವರು ಬಿ.ಇ. ವ್ಯಾಸಂಗವನ್ನು ಮುಂದುವರಿಸುತ್ತಿದ್ದಾರೆ. ನಿರುದ್ಯೋಗ ಡಿಪ್ಲೋಮಾದಾರಕರಿಗೆ ಅಡಿಷನಲ್ ಡಿಪ್ಲೋಮಾ ಇನ್ ಮೆಕ್ಯಾನಿಕಲ್ ಕೋರ್ಸಿಗೆ ಪ್ರವೇಶಾವಕಾಶ ನೀಡಲು ಪ್ರಯತ್ನಿಸಲಾಗುತ್ತಿದೆ.

ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಪ್ರಯತ್ನವನ್ನು ಮುಂದುವರಿಸಿ ಇವರಿಗೆ ಸಕ್ಕರೆ ಮತ್ತು ಕಾಗದ ಕಾರ್ಖಾನೆಗಳಲ್ಲಿ ಉದ್ಯೋಗ ದೊರಕುವಂತೆ ಪ್ರಯತ್ನಿಸುತ್ತಿದ್ದೇವೆ.

3) ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸಲು, ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ನಿರ್ಮಾಣ ಹಂತದಲ್ಲಿರುವ ಯಗಚಿ ಅಣೆಕಟ್ಟಿನಿಂದ ಶಾಶ್ವತ ಕುಡಿಯುವ ನೀರು ಒದಗಿಸಿಕೊಡುವುದು

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು): ಮಾನ್ಯ ಉಪಾಧ್ಯಕ್ಷರೇ, ಚಿಕ್ಕಮಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಈ ಸಮಸ್ಯೆ ಬಗೆಹರಿಸಲು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ನಿರ್ಮಾಣ ಹಂತದಲ್ಲಿರುವ ಯುಗಚಿ ಅಣೆಕಟ್ಟಿನಿಂದ ಶಾಶ್ವತ ಕುಡಿಯುವ ನೀರು ಒದಗಿಸಲು ಸರ್ಕಾರ ನಿರ್ಣಯಿಸಿ 1990-91ರ ಬಜೆಟ್‌ನಲ್ಲಿ 7.5 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಮಂಜೂರುಮಾಡುತ್ತಿದೆ.

ಕುಡಿಯುವ ನೀರಿನ ಪೂರೈಕೆಯನ್ನು ಸರ್ಕಾರವು ಬ್ಯಾಕ್ ವಾಟರ್‌ನಿಂದ ಕೊಡುತ್ತದೆಯೋ ಅಥವಾ ಹೆಡ್ ವಾಟರ್‌ನಿಂದ ಕೊಡಲು ನಿರ್ಧರಿಸಿದೆಯೇ ಎಂಬ ಉತ್ತರವನ್ನು ಸರ್ಕಾರದಿಂದ ನಿರೀಕ್ಷಿಸುತ್ತೇನೆ. ಹಾಗೂ ಯೋಜನೆಯ ಕಾರ್ಯ ಆರಂಭ ಯಾವಾಗ ಪ್ರಾರಂಭವಾಗುತ್ತದೆ ಎಂಬುದನ್ನು ದಯವಿಟ್ಟು ಮಾನ್ಯಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜಿ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಚಿಕ್ಕಮಗಳೂರು ಪಟ್ಟಣ ಚಿಕ್ಕಮಗಳೂರು ಜಿಲ್ಲೆಯ ಕೇಂದ್ರವಾಗಿರುತ್ತದೆ. 1981 ಜನಗಣತಿಯ ಪ್ರಕಾರ 68571 ಜನಸಂಖ್ಯೆ ಇದ್ದು, ಹಾಲಿ ಜನಸಂಖ್ಯೆಯು 80,000 ಸಾವಿರ ಇರಬಹುದು. ಪ್ರಸ್ತುತ ಚಿಕ್ಕಮಗಳೂರು ಕುಡಿವ ನೀರನ್ನು ಹೀರೇಕೊಳಲು ಟ್ಯಾಂಕ್ ಮತ್ತು ಹೊನ್ನಮ್ಮನಹಳ್ಳಿಯಿಂದ ಸರಬರಾಜು ಮಾಡಲಾಗುತ್ತಿದೆ. ಹಾಲಿ ಯೋಜನೆಯು ರೂ. 80 ಲಕ್ಷಗಳಿಗೆ ಸರ್ಕಾರದ ಪತ್ರದ ಸಂಖ್ಯೆ ಎನ್.ಇ. 20 ಯು.ಡಬ್ಲು.ಎಸ್. 86 ದಿನಾಂಕ 28-10-86ರಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ. ಈ ಯೋಜನೆಯಲ್ಲಿಯ ಎಲ್ಲಾ ಕಾಮಗಾರಿಗಳು ಮುಗಿದಿದ್ದು, 1988ರಲ್ಲಿ ಪ್ರಾರಂಭಿಸಲಾಯಿತು. ಈಯೋಜನೆಯಲ್ಲಿ ಹೊನ್ನಮ್ಮನ ಹಳ್ಳದಿಂದ ಬರುವ ನೀರನ್ನು ಹೀರೇಕೊಳ್ಳಲು ಟ್ಯಾಂಕ್ ನಲ್ಲಿ ಶೇಖರಿಸಲಾಗುತ್ತಿದೆ.